# <u>ಕರ್ನಾಟಕ ವಿಧಾನ ಪರಿಷತ್</u>

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 646(786)
**ಸದಸ್ಯರ ಹೆಸರು** : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
**ಉತ್ತರಿಸುವ ದಿನಾಂಕ** : 26.12.2022
**ಉತ್ತರಿಸುವ ಸಚಿವರು** : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಒಂದು ತರಗತಿಯಲ್ಲಿ ವಿದ್ಯಾರ್ಥಿಗಳ ಅನುಪಾತ 70:1 ಶಿಕ್ಷಕರ ಅನುಪಾತ ಕಡಿಮೆ ಇರುವುದರಿಂದ ಗುಣಮಟ್ಟದ ಶಿಕ್ಷಣಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಕೆ.ಪಿ.ಎಸ್ ಶಾಲೆಯಲ್ಲಿರುವಂತೆ ವಿದ್ಯಾರ್ಥಿ ಹಾಗೂ ಶಿಕ್ಷಕರ ಅನುಪಾತವನ್ನು 40:1ರಂತೆ ಸದರಿ ಶಾಲೆಗಳಲ್ಲೂ ಜಾರಿಗೆ ತರಲು ಸರ್ಕಾರಕ್ಕಿರುವ ತೊಂದರೆಗಳೇನು; | ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಅನುಪಾತವನ್ನು 1:70 ರಿಂದ 1:50 ಕ್ಕೆ ಪರಿಗಣಿಸಲು ಉದ್ದೇಶಿಸಿ ಆರ್ಥಿಕ ಇಲಾಖೆಯ ಅಭಿಪ್ರಾಯ/ಸಹಮತಿಯನ್ನು ಕೋರಲಾಗಿತ್ತು. ಆರ್ಥಿಕ ಇಲಾಖೆಯು ರಾಜ್ಯದಲ್ಲಿನ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಅನುಪಾತವನ್ನು 1:70 ರಿಂದ 1:50 ಕ್ಕೆ ಪರಿಗಣಿಸಲು ಪ್ರಸ್ತುತ ಜಾರಿಯಲ್ಲಿರುವ ಆರ್ಥಿಕ ಮಿತವ್ಯಯ/ನಿರ್ಬಂಧಗಳ ಹಿನ್ನಲೆಯಲ್ಲಿ ಒಪ್ಪಲು ಸಾಧ್ಯವಿಲ್ಲವೆಂದು ತಿಳಿಸಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಜಾರಿಗೊಳಿಸಲು ಸಾಧ್ಯವಾಗಿರುವುದಿಲ್ಲ. |
| ಇ) | ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿ ಹಾಗೂ ಶಿಕ್ಷಕರ ಅನುಪಾತವನ್ನು ಈಗಿನ 70:1ರ ಬದಲಾಗಿ 40:1ರಂತೆ ಅನುಪಾತವನ್ನು ಜಾರಿಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ; | |
| ಈ) | ಯಾವ ಕಾಲಮಿತಿಯಲ್ಲಿ 40:1 ಅನುಪಾತವನ್ನು ಜಾರಿಗೊಳಿಸಲಾಗುವುದು? | |

ಸಂಖ್ಯೆ:ಇಪಿ 631 ಎಸ್ಇಎಸ್ 2022

(ಬಿ.ಸಿ.ನಾಗೇಶ್)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
ಹಾಗೂ ಸಕಾಲ ಸಚಿವರು

| | | |
|---|---|---|
| ಇ) | ಹಾಗಿದ್ದಲ್ಲಿ, ಈಗ ವೈದ್ಯಕೀಯ ಸೀಟು ಪ್ರವೇಶಕ್ಕೆ ಇರುವ ದುಬಾರಿ ಶುಲ್ಕ ಪಾವತಿಸಲು ಸಾಧ್ಯವಾಗದೆ ಹಾಗೂ ತಮ್ಮ ಇಷ್ಟದ ವೈದ್ಯಕೀಯ ಕಾಲೇಜುಗಳು ಸಿಗದೆ ಸುಮಾರು ಹತ್ತು ಸಾವಿರದಷ್ಟು ವಿದ್ಯಾರ್ಥಿಗಳು ವಾಪಸ್ಸು ಇಂಜಿನಿಯರಿಂಗ್ ಸೀಟು ಪಡೆಯಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಸ್ಪಷ್ಟವಾದ ಮಾಹಿತಿಯನ್ನು ನೀಡುವುದು) | ಸೀಟು ಹಂಚಿಕೆ ಪ್ರಕ್ರಿಯೆಗೆ ಮುಂಚಿತವಾಗಿ ಕೆಇಎ ವೆಬ್‌ಸೈಟಿನಲ್ಲಿ ಕಾಲೇಜುವಾರು/ಕೋರ್ಸುವಾರು ಶುಲ್ಕದ ಮಾಹಿತಿಯನ್ನು ಪ್ರಕಟಿಸಲಾಗಿರುತ್ತದೆ. ಅಭ್ಯರ್ಥಿಯು ತಾನು ಪಡೆಯಲು ಇಚ್ಛಿಸಿರುವ ಸೀಟನ್ನು ಮಾತ್ರ ಅವರ ಇಚ್ಛೆಯಲ್ಲಿ ನಮೂದಿಸಬೇಕು. ದುಬಾರಿ ಶುಲ್ಕ ವೈದ್ಯಕೀಯ ಸೀಟನ್ನು ಅಭ್ಯರ್ಥಿಯು ಒಂದು ವೇಳೆ ಸ್ವಇಚ್ಛೆಯಿಂದ ಆಪ್ಷನ್ ಎಂಟ್ರಿ ಮಾಡುವಾಗ ನಮೂದಿಸಿದ್ದರೆ, ಅಭ್ಯರ್ಥಿಗಳು ಗಳಿಸಿರುವ ಮೆರಿಟ್ ಆಧಾರದ ಮೇಲೆ ಹಾಗೂ ಆಪ್ಷನ್ ಎಂಟ್ರಿಯಲ್ಲಿ ನಮೂದಿಸಿರುವ ಸೀಟುಗಳನ್ನು ಪರಿಗಣಿಸಿ ಸೀಟು ಹಂಚಿಕೆಯನ್ನು ತಂತ್ರಾಂಶದ ಮೂಲಕ ಮಾಡಲಾಗುತ್ತದೆ. ಒಂದು ವೇಳೆ ದುಬಾರಿ ಶುಲ್ಕವಿರುವ ವೈದ್ಯಕೀಯ ಸೀಟು ಅಭ್ಯರ್ಥಿಗೆ ಹಂಚಿಕೆಯಾದಲ್ಲಿ ಅವರೇ ಅದಕ್ಕೆ ನೇರ ಹೊಣೆಗಾರರಾಗುತ್ತಾರೆ.<br><br>ಈ ರೀತಿಯ ದುಬಾರಿ ಶುಲ್ಕದ ವೈದ್ಯಕೀಯ ಸೀಟನ್ನು ಆಪ್ಷನ್ ಎಂಟ್ರಿಯಲ್ಲಿ ನಮೂದು ಮಾಡಿದ ಕಾರಣ ಅದೇ ಸೀಟುಗಳು ಹಂಚಿಕೆಯಾಗಿ ನಂತರ ಆ ಸೀಟನ್ನು ರದ್ದುಗೊಳಿಸಿ ಈ ಹಿಂದೆ ಹಂಚಿಕೆಯಾಗಿರುವ ಇಂಜಿನಿಯರಿಂಗ್ ಸೀಟಿಗೆ ಪ್ರವೇಶ ನೀಡುವಂತೆ ಕೋರಿದ್ದ ಸುಮಾರು 51 ಅಭ್ಯರ್ಥಿಗಳಿರುತ್ತಾರೆ. ಅವರುಗಳಿಗೆ ಇಂಜಿನಿಯರಿಂಗ್ ಎರಡನೇ ಮುಂದುವರೆದ ಸುತ್ತಿನ ನಂತರ ಉಳಿದಿರುವ ಸೀಟುಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಅದರಲ್ಲಿ ಸುಮಾರು 41 ಅಭ್ಯರ್ಥಿಗಳು ಕಾಲೇಜಿಗೆ ವರದಿ ಮಾಡಿಕೊಂಡಿರುತ್ತಾರೆ. ಉಳಿದ 10 ಅಭ್ಯರ್ಥಿಗಳು ಬೇರೆ ಕೋರ್ಸುಗಳಿಗೆ ಪ್ರವೇಶ ಪಡೆದಿರುವುದಾಗಿ ಹಾಗೂ ಈಗಾಗಲೇ ಹಂಚಿಕೆಯಾಗಿರುವ ಇಂಜಿನಿಯರಿಂಗ್ ಸೀಟಿನಲ್ಲಿ ಆಸಕ್ತಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. |

ಇಡಿ 346 ಟಿಇಸಿ 2022

(ಡಾ|| ಅಶ್ವತ್ಥನಾರಾಯಣ್.ಸಿ.ಎನ್)

ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಸಚಿವರು